**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC.33/2024**

| | | |
|---|---|---|
| ಸಾಕ್ಷಿದಾರರ ಹೆಸರು | : | ಆನಂದ ಕುಮಾರ |
| ತಂದೆಯ/ಗಂಡನ ಹೆಸರು | : | ನಾಗರಾಜಪ್ಪ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸ ಸ್ಥಳ | : | ದಾವಣಗೆರೆ |

ಪಿ.ಡಬ್ಲ್ಯೂ 1

ಸಿ.ಡಬ್ಲ್ಯೂ 1

ದಿ: 18-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ನಾನು ಸುಮಾರು ವರ್ಷಗಳಿಂದ ನಾನು ತಳ್ಳುವ ಗಾಡಿಯಲ್ಲಿ ತಿಂಡಿ ವ್ಯಾಪಾರ ಮಾಡುತ್ತಿದ್ದೇನೆ. ಚಾಸಾ-9 ರವರ ಪರಿಚಯ ನನಗೆ ಇದೆ. ನಾನು ಮತ್ತು ಚಾಸಾ-9 ಇಬ್ಬರೂ ಒಂದೇ ತಳ್ಳುವ ಗಾಡಿಯಲ್ಲಿ ದೋಸೆ ವ್ಯಾಪಾರ ಮತ್ತು ಗೋಬಿ ಮಂಚೂರಿ ವ್ಯಾಪಾರ ಮಾಡಿಕೊಂಡು ಬರುತ್ತಿದ್ದೆವು. ಆರೋಪಿ ಪರಿಚಯ ನನಗೆ ಇದೆ. ಆರೋಪಿಯು ಕಾರ ಮಂಡಕ್ಕಿ ವ್ಯಾಪಾರವನ್ನು ತಳ್ಳುವ ಗಾಡಿಯಲ್ಲಿ ಮಾಡುತ್ತಿದ್ದರು. ದಾವಣಗೆರೆಯ ಹೈಸ್ಕೂಲ್ ಫೀಲ್ಡ್ ನಲ್ಲಿ ಹಿಂದೂ ಮಹಾ ಸಭಾ ಮಹಾ ಗಣಪತಿ ಪ್ರತಿಷ್ಠಾಪನೆ ಆಗಿದ್ದು, ನಾನು ಮತ್ತು ಚಾಸಾ-9 ದೋಸೆ ಮತ್ತು ಗೋಬಿ ಮಂಚೂರಿ ವ್ಯಾಪಾರವನ್ನು ತಳ್ಳುವ ಗಾಡಿಯಲ್ಲಿ ಮಾಡುತ್ತಿದ್ದೆವು. ದಿನಾಂಕಃ 20.09.2022 ರಂದು ನಾನು ರಜಾ ಹೋಗಿದ್ದರಿಂದ ಚಾಸಾ-9 ಒಬ್ಬರೇ ಗೋಬಿ ಮಂಚೂರಿ ವ್ಯಾಪರವನ್ನು ತಳ್ಳುವ ಗಾಡಿಯಲ್ಲಿ ಮಾಡಲು ಹೋಗಿದ್ದರು. ನ್ಯಾಯಾಲಯದ ಮುಂದೆ ಇರುವ ಆರೋಪಿಯು ಚಾಸಾ-9 ರವರಿಗೆ ಗಾಡಿ ವ್ಯಾಪಾರದ

ಬಗ್ಗೆ " ಸೂಳೆ ಮಗನೇ, ಕೊಲೆ ಮಾಡುತ್ತೇನೆ ಅಂತ ವ್ಯಾಪಾರ ಮಾಡುವ ಸ್ಥಳದಲ್ಲಿ ತಳ್ಳುವ ಗಾಡಿ ನಮ್ಮ ಗಾಡಿ ಮುಂದೆ ನಿನ್ನ ಗಾಡಿ ಹಾಕಬೇಡ" ಅಂತ ಬೈದಾಡಿ ಮತ್ತು ಚಾಸಾ-9 ರವರಿಗೆ ಹಲ್ಲೆ ಮಾಡಿದರು. ಸುಮಾರು ರಾತ್ರಿ 8-00 ಗಂಟೆ ಸುಮಾರಿಗೆ ನನಗೆ ಚಾಸಾ-9 ರವರು ಫೋನ್ ಮಾಡಿ ಈ ವಿಷಯವನ್ನು ಆ ದಿನ ತಿಳಿಸಿದರು. ಆ ಗಲಾಟೆಯು ಸಂಜೆ 5-20 ರಿಂದ 5-30 ಗಂಟೆಗೆ ಆಗಿರುತ್ತದೆ ಅಂತ ಹೇಳಿದರು. ಅದಕ್ಕೆ ನಾನು ಚಾಸಾ-9 ರವರಿಗೆ "ನಾವು ವ್ಯಾಪಾರ ಮಾಡಲು ಬಂದಿದ್ದೇವೆ ವ್ಯಾಪಾರ ಮಾಡಿಕೊಂಡು ಹೋಗೋಣ ಬೇರೆ ಏನು ಗಲಾಟೆ ಮಾಡುವುದು ಬೇಡ " ಅಂತೆ ಹೇಳಿದೆನು.

2. ದಿನಾಂಕಃ 21.09.2022 ರಂದು ನಾನು ಚಾಸಾ-9 ಎಂದಿನಂತೆ ನಮ್ಮ ವ್ಯಾಪಾರ ಮಾಡಲು ತಳ್ಳುವ ಗಾಡಿಯಲ್ಲಿ ಹೈಸ್ಕೂಲು ಮೈದಾನದ ಹಿಂಬದಿಗೆ ಹೋಗಿದ್ದೆವು. ಆಗ ಸಮಯ ಸಂಜೆ 5-30 ಗಂಟೆ ಆಗಿತ್ತು. ಆಗ ನ್ಯಾಯಾಲಯದ ಮುಂದೆ ಇರುವ ಆರೋಪಿಯು ಅಲ್ಲಿಗೆ ಬಂದು "ಲೋಫರ್ ಸೂಳೆ ಮಗನೇ ನಿನ್ನೆ ಅಷ್ಟು ಹೇಳಿದರೂ ಬಂದು ವ್ಯಾಪಾರ ಮಾಡುತ್ತೀಯಾ ನಿನಗೆ ಐತೆ ಒಂದು ಗತಿ ಕಾಣಿಸುತ್ತೇನೆ " ಅಂತ ನನಗೆ ಹೇಳಿದನು, ಅದಕ್ಕೆ ನಾನು ನಾವು ವ್ಯಾಪಾರ ಮಾಡಲು ಬಂದಿದ್ದೇವೆ, ಜಗಳ ಮಾಡಲು ಬಂದಿಲ್ಲ ಅಂತ ಹೇಳಿದೆನು. ಅದಕ್ಕೆ ಮತ್ತೊಮ್ಮೆ ಆರೋಪಿಯು ಅದೇ ರೀತಿ ಬೈದಾಡುತ್ತಾ ತಳ್ಳುವ ಗಾಡಿಯಲ್ಲಿದ್ದ ಒಂದು ಚಾಕುವನ್ನು ತೆಗೆದುಕೊಂಡು ಕೊಲೆ ಮಾಡುವ ಉದ್ದೇಶದಿಂದ ಬಂದು ನನ್ನ ಹೊಟ್ಟೆಗೆ ಹಾಕಲು ಬಂದಾಗ ಆಗ ನಾನು ಓಡಿ ಹೋದೆ, ಆಗ ಧನಂಜಯ ನಾಯ್ಕ ಮತ್ತು ದೇವೇಂದ್ರ ನಾಯ್ಕ ರವರು ನನ್ನನ್ನು ಹಿಡಿದುಕೊಂಡು, ಆಗ ನ್ಯಾಯಾಲಯದ ಮುಂದೆ ಇರುವ ಆರೋಪಿಯು ನನ್ನ ಹೊಟ್ಟೆಗೆ ಚಾಕು ಹಾಕಲು ಬಂದಾಗ ನಾನು ಆಗ ತಪ್ಪಿಸಿಕೊಳ್ಳಲು ಹೋಗುವಾಗ ಚಾಕು ನನ್ನ ಎಡ ಭುಜಕ್ಕೆ ಬಿತ್ತು ಮತ್ತು ನನಗೆ ಗಾಯವಾಯಿತು. ಆಗ ಅಳಿಯನಾದ ಚಾಸಾ-9 ಮತ್ತು 10 ರವರು ಬಂದು ಜಗಳ ಬಿಡಿಸಿದರು. ಮತ್ತು ಜಗಳ ಏನು ಬೇಡ ಅಂತ ಸಮಧಾನ ಮಾಡಿ ಕಳುಹಿಸಿದರು. ಆಗ ಆರೋಪಿಯು "ಇನ್ನೊಂದು ಸಲ ಬಿಡುವುದಿಲ್ಲ ಕೊಲೆ ಮಾಡಿಯೇ ಮಾಡುತ್ತೇನೆ" ಅಂತ ಜೀವ ಭೆದರಿಕೆ ಹಾಕಿದರು. ಅಲ್ಲಿಂದ ನಾನು ಸಿ ಜಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು, ಪೋಲೀಸ್ ಠಾಣೆಗೆ ಹೋಗಿ ರಾತ್ರಿ 9-30

ಗಂಟೆ ಸಮಯದಲ್ಲಿ ದೂರನ್ನು ಕೊಟ್ಟೆ. ಆ ದೂರನ್ನು ಈಗ ನಾನು ನೋಡುತ್ತಿದ್ದು ಅದನ್ನು ನಿಪಿ-1 ಎಂದು ಅದರಲ್ಲಿನ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

3. ದಿನಾಂಕಃ 22.09.2022 ರ ಮದ್ಯಾಹ್ನ 11-00 ಗಂಟೆ ಸಮಯದಲ್ಲಿ ಹೈಸ್ಕೂಲು ಮೈದಾನದ ಬಳಿ ಪೋಲೀಸರು ರಮೇಶನಾಯ್ಕರವರು ಏನು ಮಾಡಲು ಬಂದಿದ್ದ ಎಂದಾಗ ನಾನು ನನಗೆ ಕೊಲೆ ಮಾಡಲು ಬಂದ ಸ್ಥಳವನ್ನು ತೋರಿಸಿಕೊಟ್ಟಿರುತ್ತಾರೆ. ಆ ಸ್ಥಳವನ್ನು ಪೋಲೀಸರು ನೋಡಿ, ನನಗೆ ಸಂಬಂಧಪಟ್ಟ ಹಳದಿ ಟೀ ಶರ್ಟ್ ಮತ್ತು ಬನಿಯನ್ ನ್ನು ಪೋಲೀಸರು ತಮ್ಮ ವಶಕ್ಕೆ ಪಡೆದುಕೊಂಡರು. ಆ ಸ್ಥಳದಲ್ಲಿ ಮದ್ಯಾಹ್ನ 12-30 ಸಮಯದಲ್ಲಿ ಮಹಜರು ಮಾಡಿ ಮುಗಿಸಿದರು. ಆ ಮಹಜರನ್ನು ಈಗ ನಾನು ನೋಡುತ್ತಿದ್ದು ಅದನ್ನು ನಿಪಿ-2 ಎಂದು ಅದರಲ್ಲಿನ ನನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಪೋಲೀಸರು ಆ ಸ್ಥಳದ ಎರಡು ಪೋಟೋಗಳನ್ನು ತೆಗೆದರು. ಅದನ್ನು ಈಗ ನಾನು ನೋಡುತ್ತಿದ್ದು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು. ನಿಪಿ-3 ರ ಪೋಟೋದಲ್ಲಿ ನಾನು ಪೋಲೀಸರಿಗೆ ಕೊಟ್ಟಂತಹ ಹಳದಿ ಬಣ್ಣದ ಟೀ ಶರ್ಟ್ ಮತ್ತು ಬಿಳಿ ಬಣ್ಣದ ಬನಿಯನ್ ಕೊಡುತ್ತಿರುವುದು ಕಂಡುಬರುತ್ತದೆ. ನಿಪಿ-4 ರಲ್ಲಿ ನಾನು ಪೋಲೀಸರಿಗೆ ಮಹಜರಿಗೆ ಸ್ಥವನ್ನು ತೋರಿಸುತ್ತಿರುವ ಬಗ್ಗೆ ಕಂಡು ಬರುತ್ತದೆ. ಆ ಬನಿಯನ್ ಮತ್ತು ಟೀ ಶರ್ಟ್ ಗೆ ರಕ್ತದ ಕಲೆ ಇತ್ತು, ಅವುಗಳನ್ನು ನೋಡಿದರೆ ನಾನು ಗುರುತಿಸುತ್ತೇನೆ. ತೆರೆದ ನ್ಯಾಯಾಲಯದಲ್ಲಿ ಸೀಲ್ ಆಗಿರುವ ಎರಡು ಪ್ಯಾಕೇಟ್ ಗಳನ್ನು ತೆರೆದು ನೋಡಿದಾಗ ಸಾಕ್ಷಿದಾರರು ತಮ್ಮ ಹಳದಿ ಬಣ್ಣದ ಟೀ ಶರ್ಟನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಎಂ ಓ -1 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಬಿಳಿ ಬಣ್ಣದ ಬನಿಯನ್ ನ್ನು ನೋಡುತ್ತಿದ್ದು ಅದನ್ನು ಎಂ ಓ 2 ಎಂದು ಗುರುತಿಸಲಾಯಿತು. ಎಂ ಓ -1 ಮತ್ತು 2 ಗಳಲ್ಲಿ ಒಣಗಿದ ರಕ್ತದ ಕಲೆಗಳು ಇರುತ್ತವೆ. ಆರೋಪಿಯು ನನಗೆ ಕೊಲೆ ಮಾಡಲು ನನಗೆ ಹೊಟ್ಟೆಗೆ ಹಾಕಲು ತಂದಿದ್ದ ಚಾಕುವನ್ನು ನೋಡಿದರೆ ಗುರುತಿಸುತ್ತೇನೆ. ತೆರೆದ ನ್ಯಾಯಾಲಯದಲ್ಲಿ ಸೀಲ್ ಕವರ್ ನಲ್ಲಿ ಇದ್ದಂತಹ ಚಾಕುವನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ಎಂ ಓ -3 ಎಂದು

ಗುರುತಿಸಲಾಯಿತು. ಆ ಚಾಕು ತರಕಾರಿ ಹೆಚ್ಚಲು ಉಪಯೋಗಿಸುವಂತಹ ಚಾಕು ಆಗಿರುತ್ತದೆ. ಆ ದಿನ ನನಗೆ ಕೊಲೆ ಮಾಡಲು ಬಂದಿದ್ದ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಯಾಗಿದ್ದು ಅವರನ್ನು ಸಾಕ್ಷಿ ಗುರುತಿಸಿರುತ್ತಾರೆ. ಆ ದಿನ ನನ್ನನ್ನು ಹಿಡಿದುಕೊಂಡಿದ್ದ ದೇವೆಂದ್ರ ನಾಯ್ಕು ಮತ್ತು ಧನಂಜಯ ನಾಯ್ಕು ರವರನ್ನು ನೋಡಿದರೆ ಗುರುತಿಸುತ್ತೇನೆ. ನಿಪಿ-2 ಕ್ಕೆ ಚಾಸಾ-4 ಮತ್ತು 5 ರವರು ಸಹಿ ಮಾಡಿರುತ್ತಾರೆ.

ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ದಾವಣಗೆರೆ.

ದಿ: 14-11-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಸ್.ಜೆ.ಕೆ., ವಕೀಲರಿಂದ ಆರೋಪಿತರ ಪರವಾಗಿ**:

4. ಹೈಸ್ಕೂಲ್ ಮೈದಾನದಿಂದ ಬಡಾವಣೆ ಪೊಲೀಸ್ ಠಾಣೆಯು 50-60 ಅಡಿ ದೂರದಲ್ಲಿರುತ್ತದೆ. ಆದ್ದರಿಂದ ಹೈಸ್ಕೂಲ್ ಮೈದಾನದಿಂದ ಬಡಾವಣೆ ಪೊಲೀಸ್ ಠಾಣೆಯು 05 ನಿಮಿಷದ ದಾರಿ ಇರುತ್ತದೆ. ನಿಪಿ-1 ರ ದೂರನ್ನು ಕೊಡುವ ಕಾಲಕ್ಕೆ ನಾನು, ಚಾಸಾ-9, 10 ಹೋಗಿದ್ದೆವು. ನಾನೇ ದೂರನ್ನು ಹೇಳಿ ಬರೆಸಿದ್ದೇನೆ. ದೂರನಲ್ಲಿ ದೂರು ಬರೆದವರು ಯಾರು ಮತ್ತು ಕಂಪ್ಯೂಟರ್ ನಲ್ಲಿ ಟೈಪ್ ಮಾಡಿದವರು ಯಾರು ಅಂತ ಬರೆದಿಲ್ಲ ಅಂದರೆ ನಿಜ. ಸಾಕ್ಷಿದಾರರು ಹೇಳುತ್ತಾರೆ ಅದನ್ನು ಪೊಲೀಸ್ ಠಾಣೆಗೆ ಹೋಗಿ ಅಲ್ಲಿನ ಕಂಪ್ಯೂಟರ್ ನಲ್ಲಿ ಮಾಡಿಸಲಾಯಿತು. ದಿಃ 20-09-2022 ರಂದು ನಾನು ಮಳೆ ಬಂದ ಕಾರಣ ಮನೆಯಲ್ಲಿದ್ದೆ. ಆರೋಪಿಯು ಚಾಸಾ-9 ರವರಿಗೆ ಏನು ಅಂತ ಹೇಳಿ ಹಲ್ಲೆ ಮಾಡಿದರು ಅಂತ ನಾನು ಖುದ್ದಾಗಿ ನೋಡಿರುವುದಿಲ್ಲ. ಸಾಕ್ಷಿದಾರರು ಹೇಳುತ್ತಾರೆ ಅದರ ಬಗ್ಗೆ ಚಾಸಾ-9 ರವರು ನಂತರದಲ್ಲಿ ತಿಳಿಸಿದರು. ದಿಃ 20-09-2022 ರಂದು ಆರೋಪಿಯು ಚಾಸಾ-9 ರವರಿಗೆ " ಸೂಳೆ ಮಗನೇ, ಕೊಲೆ ಮಾಡುತ್ತೇನೆ " ಅಂತ ಹೇಳಪಿದ್ದನ್ನು ನಾನು ಖುದ್ದಾಗಿ ಕೇಳಿಸಿಕೊಂಡಿರುವುದಿಲ್ಲ. ಸದರಿ ಸಂಗತಿಯನ್ನು ಚಾಸಾ-9 ರವರು ನನಗೆ ಪೊನ್ ನಲ್ಲಿ ತಿಳಿಸಿರುವುದಾಗಿ ನನ್ನ ದೂರಿನಲ್ಲಿ, ನನ್ನ ಹೇಳಿಕೆಯಲ್ಲಿಯಾಗಲಿ, ಮರುಹೇಳಿಕೆಯಲ್ಲಿಯಾಗಲಿ ಹೇಳಿಲ್ಲ. ಆರೋಪಿಯು ನನಗೆ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಹಲ್ಲೆ ಮಾಡಿವುದಾಗಿ ಕೊಲೆ ಮಾಡುವುದಾಗಿ ಹೇಳಿದ್ದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

5. ದಿಃ 20-09-2022 ರಂದು ಚಾಸಾ-9 ರವರು ಒಬ್ಬರೇ ಹೈಸ್ಕೂಲ್ ಮೈದಾನಕ್ಕೆ ಹೋಗಿದ್ದ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿಯು ಅವಾಚ್ಯ ಶಬ್ದಗಳಿಂದ ಬೈದಿದ್ದು ಸುಳ್ಳು ಇರುತ್ತದೆ ಅಂದರೆ ಸರಿಯಲ್ಲ. ಆ ದಿನ ಆರೋಪಿಯು ಮಂಡಕ್ಕಿ ವ್ಯಾಪಾರ ಮಾಡಲು ಅಲ್ಲಿಗೆ ಹೋಗಿರಲಿಲ್ಲ ಅಂದರೆ ಸುಳ್ಳು. ಹೈಸ್ಕೂಲ್ ಮೈದಾನದ ಹಿಂಬದಿಯಲ್ಲಿ ಟಿ.ಸಿ.ಹೆಚ್. ಸರ್ಕಾರಿ ಸಂಸ್ಥೆ ಇದೆ.

ಸರ್ಕಾರಿ ಶಾಲೆಯು ಸಂಜೆ 5.30 ಗಂಟೆಗೆ ಬಂದ್ ಆಗಿರುತ್ತದೆ ಅಂದರೆ ನಿಜ. ಆಗ ಅದು ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಇಲ್ಲದೇ ನಿರ್ಜನ ಪ್ರದೇಶವಾಗಿರುತ್ತದೆ ಅಂದರೆ ನಿಜ. ಆ ದಿನ ನಾನು ಮತ್ತು ಚಾಸಾ-9 ರವರು ವ್ಯಾಪಾರ ಮಾಡಲು ಹೈಸ್ಕೂಲ್ ಮೈದಾನದ ಹಿಂಬದಿಯಲ್ಲಿ ಹೋಗುತ್ತಿದ್ದ ಬಗ್ಗೆ ನನ್ನ ದೂರಿನಲ್ಲಿ ತಿಳಿಸಿದ್ದೇನೆ. ಹೈಸ್ಕೂಲ್ ಮೈದಾನದ ಹಿಂಬದಿಯಲ್ಲಿ ಆರೋಪಿಯು ಬಂದು " ಲೋಫರ್ ಸೂಳೆ ಮಗನೇ, ನಿನಗೆ ಒಂದು ಗತಿ ಕಾಣಿಸುತ್ತೇನೆ " ಅಂತ ಹೇಳಿದ್ದನ್ನು ದೂರಿನಲ್ಲಿ ಮತ್ತು ಹೇಳಿಕೆಯಲ್ಲಿ ಹೇಳಿದ್ದೇನೆ. ಈ ವಿಷಯವನ್ನು ದೂರಿನಲ್ಲಿ ಮತ್ತು ಹೇಳಿಕೆಯಲ್ಲಿ ಹೇಳಿರುವುದಿಲ್ಲ ಅಂದರೆ ಸುಳ್ಳು. ಆರೋಪಿಯು ನನ್ನ ಹೊಟ್ಟೆಗೆ ಚಾಕು ಹಾಕಲು ಬಂದಾಗ " ಬರ್ರೋಪ್ಪೋ ಬಿಡಿಸಿ " ಅಂತ ಸಹಾಯಕ್ಕಾಗಿ ಕೂಗಿದೀರಾ ಅಂದರೆ ಇಲ್ಲ. ಆ ಸಮಯದಲ್ಲಿ ಅದು ನಿರ್ಜನ ಪ್ರದೇಶ ಆಗಿತ್ತು ಅಂದರೆ ಸರಿಯಲ್ಲ. ನನಗೆ ಚಾಕು ಹಾಕಲು ಬಂದಾಗ ನಾನು ಓಡಿ ಹೋಗಿ ತಪ್ಪಿಸಿಕೊಂಡೆ ಆ ಕಾಲಕ್ಕೆ ಚಾಸಾ-9 ರವರು ಬಿಡಿಸಲು ಬಂದರು. ಬೇರೆ ಯಾರೂ ಬರಲಿಲ್ಲ ಅಂದರೆ ಚಾಸಾ-10 ಪ್ರಸನ್ನ ಕುಮಾರರವರು ಬಂದಿದ್ದರು. ಸಾವರ್ಜನಿಕರು ಯಾರು ಬರಲಿಲ್ಲ. ಚಾಸಾ-9 ನನ್ನೊಂದಿಗೆ ವ್ಯಾಪಾರ ಮಾಡುತ್ತಾರೆ ಮತ್ತು ಚಾಸಾ-10 ನನ್ನ ಅಳಿಯ. ಆಗ ಅವರು ಸಮಾಧಾನ ಮಾಡಿ ಕಳುಹಿಸಿದರು ಅಂತ ನಾನು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿಯು ನನಗೆ ಚಾಕು ಹಾಕಲು ಬಂದಾಗ ಧನಂಜಯ್ಯನಾಯ್ಕರವರು ಮತ್ತು ದೇವೇಂದ್ರನಾಯ್ಕರವರು ನನ್ನನ್ನು ಹಿಡಿದುಕೊಂಡರು ಅಂತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

6. ಮರುಹೇಳಿಕೆಯಲ್ಲಿ ನಾನು " ದೇವೇಂದ್ರನಾಯ್ಕ ಮತ್ತು ಚಿಕ್ಕಪ್ಪ ಧನಂಜಯ್ಯನಾಯ್ಕರವರು ನನಗೆ ಹಿಡಿದುಕೊಂಡಿರುವುದಿಲ್ಲ, ರಮೇಶ ನಾಯ್ಕ ನನಗೆ ಬೆದರಿಕೆ ಹಾಕುವಾಗ ಗಲಾಟೆ ಸ್ಥಳಕ್ಕೆ ಬಂದು ರಮೇಶ ನಾಯ್ಕ ಬಂದು ಕರೆದುಕೊಂಡು ಹೋಗಿರುತ್ತಾರೆ ಅಷ್ಟೇ, ಅವರುಗಳು ಕೃತ್ಯದಲ್ಲಿ ಭಾಗಿಯಾಗಿರುವುದಿಲ್ಲವೆಂದು ಹಾಗೂ ಆ ದಿನ ನೀಡಿದ ದೂರಿನಲ್ಲಿ ಕೃತ್ಯ ನಡೆದ ಸಮಯ ಸಂಜೆ 5.20 ಗಂಟೆ ಎಂದು ತಪ್ಪಾಗಿ ನಮೂದಾಗಿರುತ್ತದೆ" ಅಂತ ಹೇಳಿದ್ದೇನೆ ಅಂದರೆ ನಾನು ಅವರಿಬ್ಬರು ನನ್ನನ್ನು ಹಿಡಿದುಕೊಂಡಿದ್ದಾರೆ ಅಂತ ಹೇಳಿದ್ದೇನೆ. ಸದರಿ ಮರುಹೇಳಿಕೆಯ ಭಾಗವನ್ನು ನಿಡಿ-

1 ಅಂತ ಗುರುತಿಸಲಾಯಿತು. ನಾನು ಹೇಳಿದ ರೀತಿಯಲ್ಲಿ ರಮೇಲಶ ನಾಯ್ಕರವರು ನನಗೆ ಚಾಕು ಹಾಕಲು ಬಂದಿದ್ದು ನಾನು ಸುಳ್ಳು ಹೇಳಿದ್ದೇನೆ ಅಂದರೆ ಸರಿಯಲ್ಲ. ನಾನು ತಪ್ಪಿಸಿಕೊಳ್ಳಲು ಹೋದಾಗ ಚಾಕು ನನ್ನ ಎಡಭುಜಕ್ಕೆ ಬಿತ್ತು ಮತ್ತು ಚಾಸಾ-9 ಮತ್ತು 10 ರವರು ಬಂದು ಜಗಳ ಬಿಡಿಸಿ ಸಮಾಧಾನ ಮಾಡಿದರು ಅಂತ ನಾನು ಸುಳ್ಳು ಹೇಳಿದ್ದೇನೆ ಅಂದರೆ ಸರಿಯಲ್ಲ. ಆಗ ರಮೇಶರವರು ಇನ್ನೊಂದು ಸಾರಿ ಬಿಡುವುದಿಲ್ಲ ಅಂತ ಹೇಳಿದ್ದರು ಅಂತ ನಾನು ಸುಳ್ಳು ಹೇಳಿದ್ದೇನೆ ಅಂದರೆ ಸರಿಯಲ್ಲ.

7. ಈಗ ನನಗೆ ತೋರಿಸಿದ ನಿಪಿ-2 ರಲ್ಲಿ ಮಹಜರಿನ ಮೊದಲನೇ ಪುಟದಲ್ಲಿ ದಿಃ 22-09-2022 ಅಂತ ಇದೆಯಾ ಅಂದರೆ ಸಾಕ್ಷಿದಾರರು ಹೇಳುತ್ತಾರೆ ಮಹಜರನ್ನು ದಿಃ 22-09-2022 ರಂದು ಮಾಡಿರುತ್ತಾರೆ. ನಿಪಿ-2 ರಲ್ಲಿ ತಾರೀಖು 21-09-2022 ಅಂತ ಇರುತ್ತದೆ ಅಂದರೆ ಮೊದಲನೇ ಪುಟದಲ್ಲಿ ಆ ತಾರೀಖು ಇರುತ್ತದೆ. ನಿಪಿ-2 ರಲ್ಲಿ ಏನು ಬರೆದಿದ್ದಾರೆ ಅಂತ ನಾನು ಓದಿ ತಿಳಿದುಕೊಂಡಿದ್ದೇನೆ. ಸಾಕ್ಷಿದಾರರು ಹೇಳುತ್ತಾರೆ ನಾನೇ ಹೇಳಿ ಬರೆಸಿದ್ದೇನೆ. ನನಗೆ ಹಲ್ಲೆ ಮಾಡಿದ ಸ್ಥಳ ಹೈಸ್ಕೂಲ್ ಮೈದಾನದಲ್ಲಿ ಇರುತ್ತದೆ. ನಿಪಿ-3 ಮತ್ತು 4 ರ ಪೋಟೋಗಳಲ್ಲಿ ಎಕ್ಸಿಬಿಷನ್ ಕಂಡು ಬರುತ್ತೋ ಇಲ್ಲವೋ ಅಂದರೆ ಎಕ್ಸಿಬಿಷನ್ ಕಂಡು ಬರುವುದಿಲ್ಲ. ನಿಪಿ-4 ರಲ್ಲಿ ಕಬ್ಬಿಣ ಹಾಲಿನ ಗಾಡಿ ಮತ್ತು ಸೋಡಾ ಗಾಡಿ ಕಾಣುತ್ತದೆ ಅಂದರೆ ನಿಜ. ನಿಪಿ-3 ಮತ್ತು 4 ರ ಪೋಟೋಗಳಲ್ಲಿ ಆರೋಪಿಯ ಗಾಡಿ ಕಾಣುವುದಿಲ್ಲ ಅಂದರೆ ನಿಜ. ಸಾಕ್ಷಿದಾರರು ಹೇಳುತ್ತಾರೆ ನಿಪಿ-3 ಮತ್ತು 4 ರ ಪೋಟೋಗಳು ಮಹಜರ ಮಾಡುವ ಸಮಯದಲ್ಲಿ ತೆಗೆದಿರುವ ಪೋಟೋಗಳು ಇರುತ್ತವೆ ಮತ್ತು ಗಾಡಿಯನ್ನು ತೆಗೆದುಕೊಂಡು ಹೋಗಿರುತ್ತೇವೆ. ಅಲ್ಲಿರುವಂತಹ ಮಳಿಗೆಯಲ್ಲಿ ಜನರು ಇದ್ದ ಬಗ್ಗೆ ಪೋಟೋಗಳಲ್ಲಿ ಕಾಣುವುದಿಲ್ಲ. ಚಾಸಾ-2 ರವರು ನಿಟ್ಟುವಳ್ಳಿಯವರು ಮತ್ತು ಚಾಸಾ-3 ಮುದ್ದನಹಳ್ಳಿ ತೋಟದವರು ಅಂದರೆ ನನಗೆ ಗೊತ್ತಿಲ್ಲ. ಚಾಸಾ-4 ಮತ್ತು 5 ರವರು ನನಗೆ ಗೊತ್ತು. ಚಾಸಾ-2 ರಿಂದ 5 ರವರು ಸ್ಥಳೀಯ ವ್ಯಕ್ತಿಗಳು ಅಂದರೆ ನಿಜ. ಚಾಸಾ-2 ರಿಂದ 5 ರವರು ನನ್ನ ವಿಶ್ವಾಸದವರು ಇದ್ದು ಪಂಚನಾಮೆಯ ಕಾಲಕ್ಕೆ ಹಾಜರಿದ್ದರು ಅಂತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಮು.ಮಾ.1 ಮತ್ತು 2 ನನ್ನ ಕಡೆ ಇತ್ತು. ಮು.ಮಾ.1 ಮತ್ತು 2 ನನ್ನ ಮೈ

ಮೇಲೆ ಇದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡ ನಂತರ ಪೊಲೀಸ್ ಠಾಣೆಗೆ ಹೋಗಿ ಪೊಲೀಸರಿಗೆ ಕೊಟ್ಟೆ ಮು.ಮಾ.1 ಮತ್ತು 2 ಎಲ್ಲರ ಮನೆಯಲ್ಲಿ ಸಿಗುತ್ತವೆ ಅಂದರೆ ಸರಿಯಲ್ಲ. ಮು.ಮಾ.1 ಮತ್ತು 2 ರ ಮೇಲೆ ಮನುಷ್ಯನ ರಕ್ತದ ಕಲೆಗಳು ಇರಲಿಲ್ಲ ಅಂದರೆ ಸುಳ್ಳು. ಮು.ಮಾ.1 ಮತ್ತು 2 ನ್ನು ಅಮಾನತ್ತು ಮಾಡಿಕೊಂಡು ಪಂಚನಾಮೆ ಮಾಡಿದರು ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಮು.ಮಾ.3 ಚಾಕು ಎಲ್ಲರ ಮನೆಯಲ್ಲಿ ಇದ್ದೇ ಇರುತ್ತದೆ ಅಂದರೆ ಸರಿಯಲ್ಲ. ಅದನ್ನು ಅಮಾನತ್ತು ಮಾಡುವ ಕಾಲಕ್ಕೆ ಪಂಚನಾಮೆ ಮಾಡಿದರು ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ-3 ಮತ್ತು 4 ರ ಪೋಟೋಗಳನ್ನು ನಾನು ಹೇಳುವಂತಹ ಘಟನೆಯ ಸ್ಥಳದ ಪೋಟೋಗಳು ಅಲ್ಲ ಅಂದರೆ ಸರಿಯಲ್ಲ. ನಿಪಿ-3 ಮತ್ತು 4 ನ್ನು ಪೊಲೀಸ್ ಠಾಣೆಯಲ್ಲಿಯೇ ಸೃಷ್ಟಿ ಮಾಡಿದ್ದು ಅಂದರೆ ಸರಿಯಲ್ಲ. ಪಂಚರ ಸಮಕ್ಷಮ ನಿಪಿ-2 ರ ಪಂಚನಾಮೆ ಮಾಡಿದ್ದು ಸುಳ್ಳು ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.